ಶ್ರೀಮತಿ ಡಿ. ಜಿ. ಹೇಮಾವತಿ : ಮಾನ್ಯ ಅಧ್ಯಕ್ಷರೆ, ಸರ್ಕಾರ ಪ್ರಿಫರ್ ಮಾಡಿದ್ದರೆ ಮಹಿಳಾ ಪಾಲಿಟೆಕ್ನಿಕ್‌ಗಳನ್ನು ಪ್ರಾರಂಭಿಸಬಹುದಿತ್ತು. ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್‌ಗಳನ್ನು ಪ್ರಾರಂಭಿಸುವುದಕ್ಕೆ ಜಮೀನು ಕೊಡುತ್ತೇವೆಂದರೂ ಸರ್ಕಾರ ಒಪ್ಪಲಿಲ್ಲ. ನಾನು ಕೇಳಿರುವ ಪ್ರಶ್ನೆಗೆ ಸರ್ಕಾರ ಕೊಟ್ಟಿರುವ ಉತ್ತರ ಪರವಾಗಿಲ್ಲ.

ಶ್ರೀಮತಿ ಎನ್. ಜ್ಯೋತಿರೆಡ್ಡಿ : ನನ್ನ ಕ್ಷೇತ್ರವಾದ ಗೌರಿಬಿದನೂರಿನಲ್ಲೂ ಸಹ ಒಂದು ಮಹಿಳಾ ಪಾಲಿಟೆಕ್ನಿಕ್ ಕಾಲೇಜು ಇದ್ದು, ಹೊಲಿಗೆ ಮತ್ತು ಟೈಪ್‌ರೈಟಿಂಗ್ ಹೊರತಾಗಿ ಬೇರೆ ಶಾಖೆಗಳು ಯಾವುದೂ ಇಲ್ಲದಿರುವುದರಿಂದ ಕಂಪ್ಯೂಟರ್ ಕೋರ್ಸ್ ಸಹ ಇರುವಂತೆ ಮಾಡಿಕೊಟ್ಟರೆ ಒಳ್ಳೆಯದು. ಇದರ ಬಗ್ಗೆ ಆಗಲೇ ಮನವಿ ಕೊಟ್ಟಿದ್ದೇವೆ.

ಶ್ರೀ ಹೆಚ್. ಜಿ. ಗೋವಿಂದೇಗೌಡ : ಮಾನ್ಯ ಅಧ್ಯಕ್ಷರೆ, this subject is new to me ಇದರ ಬಗ್ಗೆ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುತ್ತೇನೆ.

ರಾಜ್ಯದಲ್ಲಿರುವ ದೇವಸ್ಥಾನಗಳಿಗೆ ಆನೆಗಳನ್ನು ನೀಡುವುದು.

542 - ಶ್ರೀ ರಾಮಲಿಂಗರೆಡ್ಡಿ (ಜಯನಗರ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) *ರಾಜ್ಯದಲ್ಲಿರುವ ದೇವಸ್ಥಾನಗಳಿಗೆ ಅರಣ್ಯ ಇಲಾಖೆ ಇಲ್ಲಿಯವರೆಗೆ ನೀಡಿದ ಆನೆಗಳ ಸಂಖ್ಯೆ ಎಷ್ಟು? ಹಾಗೂ ದೇವಸ್ಥಾನಗಳಾವುವು?*

2) *ಈ ಆನೆಗಳನ್ನು ನೀಡಲು ಅನುಸರಿಸುವ ನಿಯಮಗಳೇನು?*

3) *ಬೆಂಗಳೂರು ನಗರದಲ್ಲಿ ಎಷ್ಟು ದೇವಸ್ಥಾನಗಳಿಗೆ ಅರಣ್ಯ ಇಲಾಖೆ ಇಲ್ಲಿಯವರೆಗೆ ಆನೆಗಳನ್ನು ನೀಡಿದೆ? (ಪೂರ್ತಿ ವಿವರ ನೀಡುವುದು)*

4) *ಯಾವ ಯಾವ ದೇವಸ್ಥಾನಗಳಿಂದ ಆನೆಗಳನ್ನು ನೀಡುವಂತೆ ಬೇಡಿಕೆಗಳು ಬಂದಿವೆ?*

5) *ಇವುಗಳ ಬಗ್ಗೆ ಸರ್ಕಾರದಿಂದ ಯಾವಾಗ ನಿರ್ಧಾರ ಕೈಗೊಳ್ಳಲಾಗುತ್ತದೆ?*

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ ಸಚಿವರು) :

	ದೇವಸ್ಥಾನದ ಹೆಸರು	ನೀಡಿದ ಆನೆಗಳ ಸಂಖ್ಯೆ
1)	ಶ್ರೀ ಜಗದ್ಗುರು ಮೂರು ಸಾವಿರ ಮಠ, ಹುಬ್ಬಳ್ಳಿ	1
2)	ಶ್ರೀ ಮಹಾಗಣಪತಿ ದೇವಸ್ಥಾನ, ಮಲ್ಲೇಶ್ವರಂ, ಬೆಂಗಳೂರು	1
3)	ಶ್ರೀ ಗಾಯತ್ರಿ ಸೇವಾ ಸಮಿತಿ, ಯಶವಂತಪುರ, ಬೆಂಗಳೂರು	1
4)	ಶ್ರೀ ಮಧ್ವಾಚಾರ್ಯ ಶಾಂತಿಸಾರ ದಿಗಂಬರ ಜೈನ್ ಅನಾಥ ಚಂದ್ರಾಶಂ, ಶೆಡ್ಬಾಳ್	1

ದೇವಸ್ಥಾನದ ಹೆಸರು	ನೀಡಿದ ಆನೆಗಳ ಸಂಖ್ಯೆ
5) ಶ್ರೀ ಅಕ್ಕಯಮ್ಮನವರ ಬೆಟ್ಟ, ಚಿಕ್ಕಸಾಲು, ದೇವನಹಳ್ಳಿ, ಬೆಂಗಳೂರು ಜಿಲ್ಲೆ	1
6) ಶ್ರೀ ಬಾಳೆಹೊನ್ನೂರು ರಂಭಾಪುರಮಠ, ಬಾಳೆಹೊನ್ನೂರು	1
7) ಉಡುಪಿಯ ಶ್ರೀ ಕೃಷ್ಣ ದೇವಸ್ಥಾನ	1
	7 ಆನೆಗಳು

2) ಧಾರ್ಮಿಕ ಸಂಸ್ಥೆಗಳಿಂದ ಬಂದ ಬೇಡಿಕೆಯನ್ವಯ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಅವರು ಮಾಡಿದ ಶಿಫಾರಸ್ಸಿನ ಮೇಲೆ ಆನೆಗಳ ಲಭ್ಯತೆಯನ್ನು ನೋಡಿಕೊಂಡು ಸರ್ಕಾರವು ನಿಗಧಿಪಡಿಸಿದ ಬೆಲೆಗಳಲ್ಲಿ ಮಾರಾಟಕ್ಕೆ ಮಂಜೂರಾತಿ ನೀಡುತ್ತದೆ.

3) 1. ಶ್ರೀ ಮಹಾಗಣಪತಿ ದೇವಸ್ಥಾನ, ಮಲ್ಲೇಶ್ವರಂ, ಬೆಂಗಳೂರು	1 ಆನೆ
2. ಗಾಯತ್ರಿ ಸೇವಾ ಸಮಿತಿ, ಯಶವಂತಪುರ, ಬೆಂಗಳೂರು	1 ಆನೆ
	2 ಆನೆಗಳು

4) 1. ಶ್ರೀ ಪ್ಲೇಗ್ ಮಾರಿಯಮ್ಮ ಚಾರಿಟೇಬಲ್ ಟ್ರಸ್ಟ್, ಬೆಂಗಳೂರು
2. ಶ್ರೀ ಚಿಕ್ಕೋಡಿ ತಾಲ್ಲೂಕು ಬೋಜ ಶ್ರೀ ಆಚಾರ್ಯ ಶಾಂತಿ ಸಾಗರ ಸಮಿತಿ, ಬೆಳಗಾಂ.
3. ಲೋಕಮಾತಾ ದೇವಸ್ಥಾನ, ಬೆಂಗಳೂರು
4. ಶ್ರೀ ವಿಶ್ವನಾಥೇಶ್ವರ ಮತ್ತು ಮಂಜುನಾಥೇಶ್ವರ ಸ್ವಾಮೀಜಿ ಸಾ: ಹಿರೇಕೆರೂರು.
5. ಶ್ರೀ ಮದ್ರಾ ಮಹೇಶ್ವರ ಉಚ್ಚಂಗಿ ದುರ್ಗ ಕಟ್ಟಿಮನಿ ರಾಜಗುರು, ಬಳ್ಳಾರಿ.
6. ಉಡುಪಿಯ ಶ್ರೀ ಶಿರೂರು ಮಠ.
7. ಶ್ರೀ ಮುನಿಶಿರಂಗನ ಶ್ರೀ ಜಗದ್ಗುರು ಶ್ರೀ ಚಂದ್ರಶೇಖರ ಶಿವಯೋಗಿ ಮಹಾಸ್ವಾಮಿ ಮಠ, ಹುಬ್ಬಳಿ.
8. ಬೆಳಗಾವಿಯ ಜೈನ್ ಮಠ.
9. ಮುರುಗರಾಜೇಂದ್ರ ಸ್ವಾಮಿಗಳ ಮಠ ವಿರಕ್ತ ಮಠ ಗುಣಶಿ ತಾಲ್ಲೂಕು ಲಕ್ಕುಂಡಿ.
10. ಶ್ರೀ ಜಗದ್ಗುರು ಸಿಂಹಾಸನಾ ಸಂಸ್ಥಾನ ಮಠ ಸುತ್ತೂರು.
11. ಶ್ರೀ ಶೃಂಗೇರಿ ಶಾರದಾ ಪೀಠ, ಶೃಂಗೇರಿ.
12. ಶ್ರೀ ಕೊಡ್ಯಡ್ಕ ಶ್ರೀದೇವಿ ಅನ್ನ ಪೂರ್ಣೇಶ್ವರಿ ದೇವಸ್ಥಾನ, ಮೂಡುಬಿದರೆ.
13. ಬೆಳಗಾವಿಯ ನಾಗನೂರು ಮಠ.

14. ಬೆಳಗಾವಿಯ ರಾಮದುರ್ಗಾ ತಾಲ್ಲೂಕಿನ ಗೊಣಚೇ ಗ್ರಾಮದ ಶ್ರೀ ಲಕ್ಷ್ಮಿ ದೇವಸ್ಥಾನ.

15. ಮಂಗಳೂರಿನ ಶ್ರೀ ಕುದ್ರುವಳ್ಳಿಯ ದೇವಸ್ಥಾನ.

5) ಆನೆಗಳ ಲಭ್ಯತೆಯ ಆಧಾರದ ಮೇಲೆ ಕ್ರಮ ಕೈಗೊಳ್ಳಲಾಗುವುದು.

ಶ್ರೀ ರಾಮಲಿಂಗಾರೆಡ್ಡಿ : ಮಾನ್ಯ ಅಧ್ಯಕ್ಷರೆ, ನಾನು ಕೇಳಿರುವ ಪ್ರಶ್ನೆಗಳಿಗೆ ಮಂತ್ರಿಗಳು ಸಮರ್ಪಕವಾದ ಉತ್ತರ ಕೊಟ್ಟಿದ್ದಾರೆ. ಬೆಂಗಳೂರು ನಗರ ಪ್ರದೇಶಕ್ಕೆ ಆನೆಗಳನ್ನು ಕರೆದುಕೊಂಡು ಬಂದಾಗ ಆನೆ ಅರಣ್ಯ ಇಲಾಖೆಯದೇ ಇರಬಹುದು ಅಥವಾ ದೇವಸ್ಥಾನದ್ದೇ ಇರಬಹುದು, ಆನೆಗಳ ಬಗ್ಗೆ ಹೆಚ್ಚಿನ ಬಂದೋಬಸ್ತ್ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಏಕೆಂದರೆ, ಕಳೆದ ವರ್ಷ ಜಯನಗರದ ಅಶೋಕ ಪಿಲ್ಲರ್ ಹತ್ತಿರ ಆದೇನಾಯಿತೋ ಗೊತ್ತಿಲ್ಲ, ಆನೆಯನ್ನು ರಸ್ತೆಯಲ್ಲಿ ಕರೆದುಕೊಂಡು ಹೋಗುತ್ತಿದ್ದಾಗ ಅದು ಇದ್ದಕ್ಕಿಂದ್ದಂತೆ ಜನರ ಮೇಲೆ ನುಗ್ಗಿದಾಗ ಒಬ್ಬರು ಸತ್ತು ಹೋದ ಸುದ್ದಿ ನನ್ನ ಗಮನಕ್ಕೆ ಬಂದಿದೆ, ಸುದ್ದಿ ಪತ್ರಿಕೆಗಳಲ್ಲೂ ವರದಿಯಾಯಿತು. ಆನೆಗೆ ಒಂದು ರೀತಿಯ ಹುಚ್ಚು ಹಿಡಿದು ವಿಚಿತ್ರವಾಗಿ ವರ್ತಿಸಿ ಅಲ್ಲಿದ್ದ ಕಾರುಗಳನ್ನೆಲ್ಲಾ ಪುಡಿ ಪುಡಿ ಮಾಡಿತು. ಪೋಲೀಸ್ ಠಾಣೆಗೆ ಕರೆದುಕೊಂಡು ಹೋದಾಗ ಅಲ್ಲಿಯೂ ಗಲಾಟೆ ಮಾಡಿತು. ಆದುದರಿಂದ, ನಗರ ಪ್ರದೇಶಗಳಲ್ಲಿ ಆನೆಗಳನ್ನು ಕರೆದುಕೊಂಡು ಹೋಗುವಾಗ ಹೆಚ್ಚಿನ ಬಂದೋಬಸ್ತ್ ಮಾಡಬೇಕೆಂದು ನನ್ನ ಕೋರಿಕೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಕೆಲವು ಕಡೆ ಆನೆಗಳಿಂದ ಗಲಾಟೆಯಾಗಿರುವುದು ನಿಜ, ಅದಕ್ಕೆ ಸಂಪೂರ್ಣವಾಗಿ ಬಂದೋಬಸ್ತ್ ವ್ಯವಸ್ಥೆ ಮಾಡುತ್ತಿದ್ದೇವೆ. ನಾವು ತರಬೇತಿ ನೀಡಿದ ಆನೆಗಳನ್ನೇ ಕೊಡುತ್ತಿದ್ದೇವೆ. ಇತ್ತೀಚೆಗೆ ಧರ್ಮಸ್ಥಳಕ್ಕೆ ಒಂದು ಆನೆ ಕೊಟ್ಟಾಗ ಅದು ಬಹಳ ಗಲಾಟೆ ಮಾಡಿದ ಕಾರಣಕ್ಕಾಗಿ ವಾಪಸ್ಸು ತೆಗೆದುಕೊಂಡು ಮತ್ತೊಂದು ಆನೆ ಕೊಟ್ಟೆವು. ಊರುಗಳಲ್ಲಿ ಗಲಾಟೆ ಮಾಡುವಂಥ ಆನೆಗಳಿಗೆ ನಾವು ಬಂದೋಬಸ್ತ್ ವ್ಯವಸ್ಥೆ ಮಾಡುತ್ತೇವೆ.

ಡಾ|| ಎಂ. ಪಿ. ಕರ್ಕಿ : ಆನೆ ಸರಿಯಾಗಿದ್ದರೂ ಇದ್ದಕ್ಕಿದ್ದಂತೆ ಕೆಲವೊಮ್ಮೆ ವಿಚಿತ್ರವಾಗಿ ವರ್ತಿಸಿದಾಗ they run amock ಎಂದು ಹೇಳುತ್ತೇವೆ.

ಅಧ್ಯಕ್ಷರು : ಗಲಾಟೆ ಮಾಡುವ ಆನೆಗಳನ್ನು ನಿಮ್ಮ ಹತ್ತಿರ ಇಟ್ಟುಕೊಂಡು ಅಂದರೆ, ಇಲಾಖೆಯಲ್ಲಿಟ್ಟುಕೊಂಡು ಪಳಗಿಸಿ, ಪಳಗಿದ ಆನೆಗಳನ್ನು ದೇವಸ್ಥಾನಗಳಿಗೆ ಕೊಡಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ನಾನೂ ಅದನ್ನೇ ಹೇಳಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಆನೆ ತುಳಿತಕ್ಕೊಳಪಟ್ಟ ಅವರ ಸಂಖ್ಯೆ ಬಹಳ ಕಡಿಮೆಯಾಗಿದೆ. ಹತ್ತು ಜನರು ಮಾತ್ರ ಇದ್ದಾರೆ.

ಶ್ರೀ ಎ. ಟಿ. ರಾಮಸ್ವಾಮಿ : ಸನ್ಮಾನ್ಯ ಅಧ್ಯಕ್ಷರೆ, ಯಾವ ಬೆಲೆಗೆ ಆನೆಗಳನ್ನು ದೇವಸ್ಥಾನಗಳಿಗೆ ಸರ್ಕಾರ ಮಾರಾಟ ಮಾಡಿದೆ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಬೆಲೆ ನಿಗದಿ ಮಾಡಲಾಗಿದೆ. ಸಣ್ಣ ಆನೆಗಳಿಗೆ ಐವತ್ತು ಸಾವಿರ ರೂಪಾಯಿಗಳಾದರೆ ದೊಡ್ಡ ಆನೆಗಳಿಗೆ 1 ಲಕ್ಷ, 2 ಲಕ್ಷ, 7 ಲಕ್ಷ ರೂಪಾಯಿಗಳವರೆವಿಗೂ ನಿಗದಿಪಡಿಸಲಾಗಿದೆ. ಬೆಲೆ, ಆನೆಗಳ ವಯಸ್ಸಿನ ಮೇಲೆ ನಿಗದಿಯಾಗುತ್ತದೆ.

ಡಾ|| ಎಂ. ಪಿ. ಕರ್ಕಿ : ಸರಿಯಾದ, ಪಳಗಿದ ಆನೆಯಾದರೂ ಕೂಡ ಕೆಲವೊಮ್ಮೆ ವಿಚಿತ್ರವಾಗಿ ವರ್ತಿಸುತ್ತದೆ. ಅದಕ್ಕೆ running amock ಎಂದು ಹೇಳುತ್ತೇವೆ. ಅದೇ ರೀತಿ ಸೈನಿಕರು ಕೂಡ ಕೆಲವು ಸಾರಿ ತಮ್ಮ ನಾಯಕನಿಗೆ ಮೂಗು ಗಂಟು ಹಾಕುತ್ತಾರೆ. ಅದೇಕೆ ಹಾಕುತ್ತಾರೆಂದು ಗೊತ್ತಾಗುವುದಿಲ್ಲ.

MR. SPEAKER : Is it only animals that run amock. Is it only elephants that run amock annd causes panic.

DR. M.P. KARKI : Even individuals also do that.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಮಾನ್ಯ ಸದಸ್ಯರು ಮಾತನಾಡುತ್ತಾ ಆನೆಗಳು ಇದ್ದಕ್ಕಿದ್ದಂತೆ ವಿಚಿತ್ರವಾಗಿ ವರ್ತಿಸುತ್ತವೆಂದು ಹೇಳಿದರು. ಅವು ಏಕೆ ಆ ರೀತಿ ವರ್ತಿಸುತ್ತವೆಂದರೆ ಸುಮ್ಮನಿದ್ದರೆ ಏನೂ ಮಾಡುವುದಿಲ್ಲ. ಯಾರಾದರೂ ಏನಾದರೂ ಅದಕ್ಕೆ ಕೀಟಲೆ ಮಾಡಿದಾಗ, ಅಥವಾ ನೋವಾಗುವಂತೆ ಚುಚ್ಚಿದಾಗ ಮಾತ್ರ ಆ ರೀತಿ ವರ್ತಿಸುತ್ತವೆ.

ಶ್ರೀ ರಾಮಲಿಂಗಾರೆಡ್ಡಿ : ಜಯನಗರದಲ್ಲಿ ನಡೆದದ್ದು ಅದೇ ರೀತಿ. ಆನೆಯನ್ನು ರಸ್ತೆಯಲ್ಲಿ ಹಿಡಿದುಕೊಂಡು ಹೋಗುತ್ತಿದ್ದಾಗ ಸ್ಕೂಟರ್ ನಲ್ಲಿ ಹೋಗುತ್ತಿದ್ದವರು ಅದರ ಬಾಲ ಹಿಡಿದು ಎಳೆದಾಗ ಅದಕ್ಕೆ ಕೋಪ ಬಂದು ಅದು ಗಲಾಟೆ ಮಾಡಿದಾಗ ಅದರ ತುಳಿತಕ್ಕೆ ಒಬ್ಬರು ಸತ್ತು ಹೋದರು. ಪೋಲೀಸ್ ಠಾಣೆ ಹತ್ತಿರ ಜನ ಸೇರಿದಾಗಲೂ ಪುನಃ ಅಲ್ಲಿಯೂ ಗಲಾಟೆ ಮಾಡಿದೆ.

ಪ್ರಾಥಮಿಕ ಆರೋಗ್ಯ ಕೇಂದ್ರಗಳ ಹುದ್ದೆಗಳ ಕೊರತೆ

543 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಕುಂದಾಪುರ ತಾಲ್ಲೂಕಿನಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಯಾವುವು?

2. ಅವುಗಳಿಗೆ ಮಂಜೂರಾದ ಹುದ್ದೆಗಳು ಯಾವುವು? ಕೊರತೆಯಿರುವ ಹುದ್ದೆಗಳಾವುವು?

3. ಈ ಕೊರತೆಯನ್ನು ಯಾವಾಗ ಭರ್ತಿ ಮಾಡಲಾಗುವುದು?

ಡಾ|| ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

1) 18 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಇರುತ್ತವೆ. (ವಿವರ ಲಗತ್ತಿಸಿರುವ ಪಟ್ಟಿಯಲ್ಲಿದೆ).

2) ವಿವಿಧ ದರ್ಜೆಯ 337 ಹುದ್ದೆಗಳು ಮಂಜೂರಾಗಿದ್ದು, 129 ಹುದ್ದೆಗಳು ಖಾಲಿ ಇರುತ್ತವೆ. (ವಿವರದ ಪಟ್ಟಿಯನ್ನು ಲಗತ್ತಿಸಲಾಗಿದೆ)

3) ಶೀಘ್ರದಲ್ಲಿಯೇ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.